DFA/

23/12/22

148th, ಕ್ರ.ಸಂ. 31

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಂ. ನಾಗರಾಜ ಮತ್ತು ಶ್ರೀ ಕೆ. ಹರೀಶ್ ಕುಮಾರ್ ಇವರುಗಳು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

ವಿಷಯ:

1. **ಶ್ರೀ ಕೆ. ಹರೀಶ್ ಕುಮಾರ್, ಶಾಸಕರು, ವಿಧಾನ ಪರಿಷತ್ತು**

ಪ್ರಾದೇಶಿಕ ಸಾರಿಗೆ ಇಲಾಖೆ (ಆರ್.ಟಿ.ಓ) ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾಗೂ ಅಧಿಕಾರಿಗಳ ಆಟಾಟೋಪ ಮಿತಿ ಮೀರಿದ್ದು, ಮಧ್ಯವರ್ತಿಗಳನ್ನು ಬಳಸಿಕೊಳ್ಳದೆ ಅಧಿಕಾರಿಗಳಿಂದ ಯಾವ ಕೆಲಸವೂ ಸುಲಭವಲ್ಲ ಎನ್ನುವುದು ಜಗಜ್ಜಾಹೀರಾಗಿದೆ ಎಂಬ ಖೇದಕರ ಸಂಗತಿ ವಿಶ್ವವಾಣಿ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳ ಮತ್ತು ಮಧ್ಯವರ್ತಿಗಳ ಅಪವಿತ್ರ ಮೈತ್ರಿಯಿಂದ ಸಾರಿಗೆ ಇಲಾಖೆ ನಲುಗುತ್ತಿದೆ. ಬಹುತೇಕ ಪ್ರಾದೇಶಿಕ ಸಾರಿಗೆ ಕಛೇರಿಗಳು ಮತ್ತು ಗಡಿಗಳಲ್ಲಿನ ಸಾರಿಗೆ ತನಿಖಾ ಠಾಣೆಗಳು ವಸೂಲಿ ಕೇಂದ್ರಗಳಾಗಿ ಬದಲಾಗಿವೆ. ಮೂವತ್ತಕ್ಕೂ ಅಧಿಕ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸುವ ವ್ಯವಸ್ಥೆ ಸಾರಿಗೆ ಇಲಾಖೆಯಲ್ಲಿದೆ. ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತಂದರೂ ಸಾರ್ವಜನಿಕರ ತೊಂದರೆಗಳು ಯಥಾಸ್ಥಿತಿಯಲ್ಲಿರುವುದು ಕಂಡು ಬಂದಿದೆ.

ಮಧ್ಯವರ್ತಿಗಳ ನೆರವಿಲ್ಲದೆ ಒಂದೇ ದಿನದಲ್ಲಿ ಸೇವೆಗಳು ಲಭ್ಯ ಎಂಬ ನಾಮಫಲಕ ಎಲ್ಲ ಕಛೇರಿಗಳಲ್ಲೂ ರಾರಾಜಿಸುತ್ತದೆಯಾದರೂ ಅಧಿಕಾರಿಗಳೇ ಮಧ್ಯವರ್ತಿಗಳನ್ನು ನೇಮಿಸಿಕೊಳ್ಳುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಮುಖ್ಯವಾಗಿ ರಾಜ್ಯದಲ್ಲಿರುವ ಎಲ್ಲ ಪ್ರಾದೇಶಿಕ ಕಛೇರಿಗಳನ್ನು ನಿಯಂತ್ರಿಸುತ್ತಿರುವುದು ಮಧ್ಯವರ್ತಿಗಳೇ ಆಗಿದ್ದಾರೆ. ಕೆಲವು ಪ್ರಭಾವಿ ಅಧಿಕಾರಿಗಳು, ಸಿಂಡಿಕೇಟ್ ಕಟ್ಟಿಕೊಂಡು ಇಡೀ ಸಾರಿಗೆ ಇಲಾಖೆಯನ್ನು ಹಿಡಿತದಲ್ಲಿಟ್ಟುಕೊಂಡಿದ್ದು, ಎಲ್ಲ ತೀರ್ಮಾನಗಳು ಅಲ್ಲಿಂದಲೇ ಜಾರಿಯಾಗುತ್ತಿರುವುದು ವಿಪರ್ಯಾಸವೇ ಸರಿ.

ಆದಕಾರಣ, ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೇವಲ ಸುಧಾರಣೆ ಮಾತುಗಳನ್ನಾಡದೇ ಕಠಿಣ ಕ್ರಮ ಕೈಗೊಂಡು ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಸಾರ್ವಜನಿಕ ಸ್ನೇಹಿಯನ್ನಾಗಿ ಭ್ರಷ್ಟಾಚಾರರಹಿತ ವ್ಯವಸ್ಥೆಯನ್ನಾಗಿ ಮಾಡುವಲ್ಲಿ ಪಾರದರ್ಶಕ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

2) **ಶ್ರೀ ಎಂ. ನಾಗರಾಜು, ಶಾಸಕರು, ವಿಧಾನ ಪರಿಷತ್ತು**

ದಿನಾಂಕ:22-12-2022 ರ ವಿಶ್ವವಾಣಿ ದಿನ ಪತ್ರಿಕೆಯಲ್ಲಿ **ಸಾರಿಗೆ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ, ಕನಡಿಯೊಳಗಿನ ಗಂಟಿನಂತಾದ ಆನ್‌ಲೈನ್, ಹೈರಾಣಾದ ಸಾರ್ವಜನಿಕರು, ಕೈಬಿಸಿ ಮಾಡದೇ ಇದ್ದರೆ ಯಾವ ಕೆಲಸವೂ ಆಗಲ್ಲ** ಎಂಬ ವಿಚಾರವು ವರದಿ ಆಗಿರುತ್ತದೆ.

ಪ್ರತಿ ದಿನವೂ ಹೊಸ ಹೊಸ ಅವಿಷ್ಕಾರಗಳೊಂದಿಗೆ ಮುನ್ನಡೆಯುತ್ತಿರುವ ಇಂದಿನ ಕಾಲ ಘಟ್ಟದಲ್ಲಿ ತಂತ್ರಜ್ಞಾನ ಬಳಕೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಇಂತಹ ತಂತ್ರಜ್ಞಾನ ಸೌಲಭ್ಯಗಳನ್ನು ಒದಗಿಸಿದ್ದರು ಸಹ ಭ್ರಷ್ಟ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಆನ್‌ಲೈನ್ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ಬದಲು ಆ ವ್ಯವಸ್ಥೆಯನ್ನು ಬಳಸದೆ ಸಬೂಬು ನೀಡಿ ಸಾರ್ವಜನಿಕರ ಕೆಲಸಗಳನ್ನು ಸಕಾಲದಲ್ಲಿ ನಿರ್ವಹಿಸದೆ ಕಾಲವಿಳಂಬ ಮಾಡುತ್ತಿರುವುದು ಜಗಜ್ಜಾಹೀರಾಗಿದೆ.

ನೇರವಾಗಿ ಹೋದರೆ ಆರ್.ಟಿ.ಓ. ಕಛೇರಿಗಳಲ್ಲಿ ಕೆಲಸ ಕಾರ್ಯವಾಗದೆ ವಿನಾ ಕಾರಣ ಅವರನ್ನು ಅಲೆಸುತ್ತಿರುವುದು ಪ್ರತಿ ದಿನದ ವಾರ್ತೆಯಾಗಿದೆ. ಮಧ್ಯವರ್ತಿಗಳ ಮುಖಾಂತರ ಹೋದರೆ ಒಂದೇ ದಿನದಲ್ಲಿ ಕೆಲಸವಾಗುತ್ತದೆ. ಪ್ರಭಾವಿ ಅಧಿಕಾರಿಗಳ ಸಿಂಡಿಕೇಟ್ ಸಾರಿಗೆ ಇಲಾಖೆಯನ್ನು ದೀರ್ಘಕಾಲದಿಂದ ಹಿಡಿತದಲ್ಲಿ ಇಟ್ಟುಕೊಂಡಿರುವುದು ಕೂಡ ಇಲಾಖೆಯಿಂದಲೇ ಬಹಿರಂಗವಾಗಿದೆ. ಇಂತಹ ಪರಿಸ್ಥಿತಿಯಿಂದ ಸಾರಿಗೆ ಇಲಾಖೆಯನ್ನು ಹೊರತಂದು ಸಾರ್ವಜನಿಕರಿಗೆ ನೇರವಾಗಿ ಮತ್ತು ಆನ್‌ಲೈನ್ ಮುಖಾಂತರ ಸೇವೆಗಳನ್ನು ಒದಗಿಸುವಂತೆ ಕೋರಿ ಮಾನ್ಯ ಸಾರಿಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಉತ್ತರ:**

ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮತ್ತು ತನಿಖಾ ಠಾಣೆಗಳಲ್ಲಿ ಮಧ್ಯವರ್ತಿಗಳ ಹಾವಳಿ ಕುರಿತು ದಿನಾಂಕ: 22-12-2022ರಂದು ವಿಶ್ವವಾಣಿ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.



...ted from eOffice by B SREERAMULU, TD-MIN(BS), TRANSPORT MINISTER, Trans on 23/12/2022 04:22 PM

ಮಧ್ಯವರ್ತಿಗಳ ಹಾವಳಿ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಸಾರಿಗೆ ಇಲಾಖೆಯಲ್ಲಿ **30 ಸೇವೆಗಳನ್ನು** ಸಂಪರ್ಕರಹಿತವಾಗಿ ಸಾರ್ವಜನಿಕರಿಗೆ ನೇರವಾಗಿ ಆನ್ ಲೈನ್ ಮುಖಾಂತರ ಒದಗಿಸಲು ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:01-11-2021ರಂದು ಲೋಕಾರ್ಪಣೆಗೊಳಿಸಿರುತ್ತಾರೆ.

ಸಾಮಾನ್ಯವಾಗಿ ಸಾರಥಿ ಸೇವೆಗಳಿಗೆ ಸಂಬಂಧಿಸಿದಂತೆ, ಕಲಿಕಾ ಅನುಜ್ಞಾ ಪತ್ರ (L.L) ಮತ್ತು ಸಂಬಂಧಿತ ಸೇವೆಗಳು, ಚಾಲನಾ ಅನುಜ್ಞಾ ಪತ್ರ ನವೀಕರಣ, ನಕಲು ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ ವಹಿ, ಚಾಲಕ ಅನುಜ್ಞಾ ಪತ್ರದಲ್ಲಿ ವಿಳಾಸ/ಹೆಸರು ಬದಲಾವಣೆ ಮುಂತಾದ ಪ್ರಮುಖ ಸೇವೆಗಳನ್ನು ಹಾಗೂ ವಾಹನ್ ಸೇವೆಗಳಿಗೆ ಸಂಬಂಧಿಸಿದಂತೆ, ತಾತ್ಕಾಲಿಕ ನೋಂದಣಿ ಪತ್ರ ಮಾರಾಟಗಾರರ ಹಂತದಲ್ಲಿ ವಾಹನ ನೋಂದಣಿ ಸೇವೆ (ಸಾರಿಗೇತರ ವಾಹನ), ವಾಹನ ಮಾಲೀಕತ್ವ ವರ್ಗಾವಣೆ, ವಾಹನಗಳಿಗೆ ರಹದಾರಿ ನೀಡುವಿಕೆ ಮುಂತಾದ ಪ್ರಮುಖ ಮೋಟಾರು ಕ್ಯಾಬ್ ಸರಕು ವಾಹನಗಳಿಗೆ ಸೇವೆಗಳನ್ನೊಳಗೊಂಡಂತೆ 30 ಸೇವೆಗಳನ್ನು ಆನ್ ಲೈನ್ ಮತ್ತು ಸಂಪರ್ಕರಹಿತ ಸೇವೆಗಳನ್ನಾಗಿ ಒದಗಿಸಲಾಗುತ್ತಿದೆ. ಇದರಿಂದಾಗಿ, ಸುಮಾರು 40-50 ಲಕ್ಷ ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗೆ ಭೇಟಿ ನೀಡದೇ ನೇರವಾಗಿ ಸೇವೆಗಳನ್ನು ಪಡೆಯಬಹುದಾಗಿರುತ್ತದೆ. ಹೊಸ ನೋಂದಣಿಗೆ ಸಂಬಂಧಿಸಿದಂತೆ ವಾಹನ ಮಾಲೀಕರು ಡೀಲರ್ ಹಂತದಲ್ಲಿ ವಾಹನ ಖರೀದಿಸಿ, ತೆರಿಗೆ ಮತ್ತು ಶುಲ್ಕವನ್ನು ಪಾವತಿಸಿದ ತಕ್ಷಣವೇ ವಾಹನ ನೋಂದಣಿ ಸಂಖ್ಯೆಯು ಸೃಜನೆಯಾಗುತ್ತದೆ. ಇದರಿಂದ ವಾಹನ ಮಾಲೀಕರು ಕಛೇರಿಗೆ ಭೇಟಿ ನೀಡುವ ಅವಶ್ಯವಿರುವುದಿಲ್ಲ.

ತನಿಖಾ ಠಾಣೆಗಳಲ್ಲಿ ವಾಹನಗಳ ರಹದಾರಿ ನೀಡುವಿಕೆ ಹಾಗೂ ಇತರೆ ಸೇವೆಗಳನ್ನು ಆನ್ ಲೈನ್ ಮೂಲಕ ಸಹ ಸಂಪರ್ಕರಹಿತವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೇವಲ ಚಾಲನಾ ಪರೀಕ್ಷೆ ಮತ್ತು ವಾಹನಗಳ ಫಿಟ್‌ನೆಸ್‌ಗೆ ಸಂಬಂಧಿತ ಸೇವೆಗಳನ್ನು ಪಡೆಯಲು ಮಾತ್ರ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಖುದ್ದಾಗಿ ಭೇಟಿ ನೀಡಬೇಕಾಗುತ್ತದೆ. ವಾಹನಗಳ ಫಿಟ್‌ನೆಸ್ ಸಂಬಂಧ ಅತಿ ಹೆಚ್ಚು ಸಾರಿಗೆ ವಾಹನಗಳಿರುವ ತಾಲ್ಲೂಕು ಮಟ್ಟದಲ್ಲಿಯೂ ಸಹ ಕ್ಯಾಂಪ್‌ಗಳನ್ನು ನಡೆಸಿ ಫಿಟ್‌ನೆಸ್ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ.

ಮೇಲಿನ ಸೇವೆಗಳನ್ನು ಮತ್ತಷ್ಟು ನಾಗರೀಕ ಸ್ನೇಹಿ ಮಾಡುವ ನಿಟ್ಟಿನಲ್ಲಿ ಇ-ಆಡಳಿತ ವತಿಯಿಂದ ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ಸ್ಥಾಪನೆಗೊಂಡಿರುವ ಗ್ರಾಮ ಒನ್" "ಕೇಂದ್ರಗಳ ಮೂಲಕ ಹಾಗೂ ಬೆಂಗಳೂರು ನಗರ ವಾಸಿಗಳಿಗೆ ಅವರ ಮನೆ ಬಾಗಿಲಿಗೆ ಸೇವೆಗಳನ್ನು ನೀಡಲಾಗುತ್ತಿದೆ. "ಜನಸೇವಕ, ಯೋಜನೆ ಅಡಿಯಲ್ಲಿ ಸದರಿ ಸೇವೆಗಳನ್ನು "ಗ್ರಾಮ್ ಒನ್ ಮತ್ತು ಜನಸೇವಕ, ಯೋಜನೆಗಳಿಂದಲೂ ಸಹ ಪಡೆಯಲು ಹೆಚ್ಚಿನ ಪ್ರಚಾರ ಮಾಡಲಾಗುತ್ತಿದ್ದು, ಇದರಿಂದಾಗಿ ಪಂಚಾಯತ್ ಮಟ್ಟದಲ್ಲಿಯೂ ಸಹ ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಭೇಟಿ ನೀಡದೇ ಸಂಪರ್ಕರಹಿತವಾಗಿ ಸೇವೆಗಳನ್ನು ಪಡೆಯಬಹುದಾಗಿದೆ.

ಡಿಎಲ್ ಮತ್ತು ಆರ್ ಸಿ ಕಾರ್ಡ ಗಳನ್ನು Speed Post ಮುಖಾಂತರ ನೇರವಾಗಿ ಅರ್ಜಿದಾರರಿಗೆ ಕಳುಹಿಸಲಾಗುತ್ತಿದೆ. ಸದರಿ ಸೇವೆಯನ್ನು ಸಂಪರ್ಕರಹಿತ ಮಾದರಿಯಲ್ಲಿ ರವಾನಿಸಲು Postal ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆ ಪರಿಶೀಲನೆಯಲ್ಲಿರುತ್ತದೆ.

ಮುಂದುವರೆದು, ಜೂನ್ 2022 ಮಾಹೆಯಿಂದ FIFO (First In First Out) ಮಾದರಿಯನ್ನು ಜಾರಿಗೊಳಿಸಲಾಗಿದ್ದು, ಮೊದಲು ಸ್ವೀಕರಿಸಿದ ಅರ್ಜಿಯನ್ನು ಮೊದಲ ಆದ್ಯತೆ ನೀಡುವ ಮೂಲಕ ಕ್ರಮ ಕೈಗೊಂಡು ವಿಲೇವಾರಿಗೊಳಿಸಲಾಗುತ್ತಿದೆ.

ಮೇಲಿನಂತೆ ಕ್ರಮ ಕೈಗೊಳ್ಳಲಾಗುವುದರಿಂದ ಅರ್ಜಿದಾರರು ಸಂಪರ್ಕರಹಿತವಾಗಿ/ಆನ್ ಲೈನ್ ಮುಖಾಂತರ ನೇರವಾಗಿ ಕಛೇರಿಗೆ ಭೇಟಿ ನೀಡದೆ ಸೇವೆಗಳನ್ನು ಪಡೆಯಬಹುದಾಗಿದೆ ಹಾಗೂ ಈಗಾಗಲೇ 7 ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯಲ್ಲಿ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ನಿರ್ಮಿಸಿ ಮಾನವ ಹಸ್ತಕ್ಷೇಪವಿಲ್ಲದೆ ಪಾರದರ್ಶಕವಾಗಿ ಸಾರ್ವಜನಿಕರಿಗೆ ಸೇವೆ ನೀಡಲಾಗುತ್ತಿದೆ. ಉಳಿದಂತೆ, 7 ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯಲ್ಲಿ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿರುತ್ತದೆ. 2022-23ನೇ ಸಾಲಿನ ಆಯವ್ಯಯದಲ್ಲಿ 9 ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯಲ್ಲಿ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ನಿರ್ಮಿಸಲು ಘೋಷಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಇವುಗಳಿಂದಾಗಿ, ಚಾಲನಾ ಪರೀಕ್ಷೆಗೆ ಒಳಪಡುವ ಅಭ್ಯರ್ಥಿಗಳು



...erated from eOffice by B SREERAMULU, TD-MIN(BS), TRANSPORT MINISTER, Trans on 23/12/2022 04:22 PM

DFA/10034

ಪಾರದರ್ಶಕವಾಗಿ ಸೇವೆಗಳನ್ನು ಪಡೆಯಬಹುದಾಗಿರುತ್ತದೆ.

ವಾಹನಾ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಗಳನ್ನು ರಾಜ್ಯದ ಮೂರು ಜಿಲ್ಲೆಗಳಲ್ಲಿ ಈಗಾಗಲೇ ನಿರ್ಮಿಸಿ, ಸಾರ್ವಜನಿಕರ ಸೇವೆಗೆ ಒದಗಿಸಲಾಗಿದೆ. ಮುಂದುವರೆದು, ರಾಜ್ಯದ 15 ಜಿಲ್ಲೆಗಳಲ್ಲಿ ಸದರಿ ಸೇವೆಯನ್ನು ವಿಸ್ತರಿಸಿ ಪಿ.ಪಿ.ಪಿ ಮಾದರಿಯಲ್ಲಿ ಸೇವೆಯನ್ನು ಒದಗಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. ಇವುಗಳಿಂದಾಗಿ ಸಾರಿಗೆ ವಾಹನಗಳ ಅರ್ಹತಾ ಪ್ರಮಾಣ ಪತ್ರಗಳನ್ನು (Fitness Certificate) ಮಾನವ ಹಸ್ತಕ್ಷೇಪವಿಲ್ಲದೆ ಪಾರದರ್ಶಕವಾಗಿ ಸಾರ್ವಜನಿಕರಿಗೆ ಸೇವೆ ನೀಡಬಹುದಾಗಿರುತ್ತದೆ.

ಸಾರಿಗೆ ಇಲಾಖೆಯಲ್ಲಿ ಬಹುತೇಕ ಸೇವೆಗಳನ್ನು ಸಾರ್ವಜನಿಕರಿಗೆ ಆನ್ ಲೈನ್ ಮೂಲಕ ಸಂಪರ್ಕರಹಿತವಾಗಿ ಒದಗಿಸಲಾಗುತ್ತಿರುವುದರಿಂದ, ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ಆದಾಗ್ಯೂ ಈ ಕುರಿತು ದೂರುಗಳು ಸ್ವೀಕೃತವಾದಲ್ಲಿ ಸಂಬಂದಪಟ್ಟವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಟಿಡಿ **166** ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 23/12/2022 04:22 PM